conduct a profile survey in the area and prepare a layout plan. When the project is completed it has a potential to offer employment to more than 10,000 people directly and indirectly. The estimated investment on the development of this area is in the order of Rs. 3.45 crores as per current estimates.

SRI VEERAPPA MOILY.—The contribution to electronic industry at the all-India level from Karnataka State is 35 per cent but looking to the manner in which the Kerala Electronic Corporation is making headway we feel they will overtake us. In view of this will the Government take some steps because this is an industry which creates more employment. This is a big industry which can be started in the medium-scale sector without much power. Just somebody starting an industry would not go to the credit of the Corporation. In view of the above advantages, will the Corporation involve itself effectively to see that the Number 1 place occupied by Karnataka in this respect is retained ? At this rate if we proceed, we are likely to recede to the background as far as electronic development is concerned. May I know whether Government has chalked out any programme for rural industrialisation in terms of electronic industry instead of confining only to the urban area like Bangalore ?

SRI AZEEZ SAIT.—The place 15 kilometers away from Bangalore is rural area. The Corporation is not given the required finance. As per my information the Corporation has been given 25 lakhs and they have received about 7-8 lakhs from the Government of India. I completely agree with him that electronics has a good employment potential and I have taken up this matter with Finance Department. Besides this place we have taken up a place near Mysore also.

ಶ್ರೀ ಯು. ಬಿ. ಬೋರ್ಕರ್.—ವಿವಿಧ ರಾಜ್ಯಗಳಲ್ಲಿರುವಂತೆ ನಮ್ಮ ರಾಜ್ಯದಲ್ಲೂ ಕೂಡ ಎಲೆಕ್ಟ್ರಾನಿಕ್ಸ್ ಓದತಕ್ಕ ವಿದ್ಯಾರ್ಥಿಗಳಿಗೆ ಅದರಲ್ಲೂ ಹರಿಜನ ವಿದ್ಯಾರ್ಥಿಗಳಿಗೆ, ಹಿಂದುಳಿದ ವರ್ಗದ ವಿದ್ಯಾರ್ಥಿಗಳಿಗೆ ಸ್ಕಾಲರ್‌ಷಿಪ್ ಕೊಡತಕ್ಕ ವ್ಯವಸ್ಥೆ ಮಾಡುತ್ತೀರಾ ?

ಶ್ರೀ ಅಜೀಜ್ ಸೇಠ್.—ಈ ವಿಚಾರವನ್ನು ಪರಿಶೀಲಿಸೋಣ.

Small Savings

551 SRI B. H. LAKSHMANAIAH (Belur).—Will the Minister for Finance be pleased to state :—

(a) what is the aim of the Government in collecting Small Savings ;

(b) whether the Government is aware that the officers are demanding investment on Small Savings from the Small and marginal farmers and weaker section of the Society when they approach officers for loans, allotments, permits and licenses ?

SRI S. M. YAHYA (Minister for Finance).—

(a) The aims of the Government in collecting Small Savings are :—

(i) to inculcate the habit of thrift and savings among the people ;

(ii) to help to hold the price-line (checking inflation) by siphenius off surplus money through savings ;

(iii) to channelise the people's savings into development activities of the State. The Centre give 2/3rds of the net Small Savings collections made within the State to the State Government for financing developmental projects.

(b) Small Savings Scheme is purely voluntary. There is no question of putting any compulsion on the people to invest any Small Savings. However, State Government Officers give wide publicity to the Scheme and put in their efforts to boost Small Savings Collections. No complaints have been received from the public regarding any compulsion recently.

ಶ್ರೀ ಬಿ. ಪೆಚ್. ಲಕ್ಷ್ಮಣಯ್ಯ.—ಸ್ವಾಮಿ, ನನ್ನ (ಅ) ಪ್ರಶ್ನೆಗೆ ಉತ್ತರವಾಗಿ ಈ ಸಣ್ಣ ಉಳಿತಾಯವನ್ನು ಜನರು ಸ್ವಪ್ರೇರಣೆಯಿಂದ ಮಾಡುತ್ತಾರೆ. ನಾವು ಇದನ್ನು ಕಡ್ಡಾಯವಾಗಿ ವಸೂಲ್ಮಾಡುವುದಿಲ್ಲವೆಂದು ಉತ್ತರ ಕೊಟ್ಟಿದ್ದೀರಿ. ಆಲ್ಲದೆ ಇದರ ಬಗ್ಗೆ ಯಾವ ದೂರುಗಳೂ ಬಂದಿಲ್ಲವೆಂದು ಹೇಳಿದ್ದೀರಿ. ತಹಸೀಲ್ದಾರ್ ಆಫೀಸ್, ಬಿ.ಡಿ.ಓ. ಆಫೀಸ್, ಜಿಲ್ಲಾಧಿಕಾರಿಯವರ ಕಛೇರಿ, ಇನ್ನೂ ಇತರ ಕಛೇರಿಗಳಿಗೆ ಎಲ್ಲೇ ಹೋಗಿ ನೋಡಿದರೂ ಲೈಸೆನ್ಸ್ ಕೊಡುವಾಗ, ಒಂದು ಮೂಟೆ ಸಿಮೆಂಟ್ ಬೇಕೆಂದು ಕೇಳಿದರೆ, ಇನ್ಯಾವುದೇ ಲೈಸೆನ್ಸ್ ತೆಗೆದುಕೊಳ್ಳುವಾಗ ಸಂಬಂಧಪಟ್ಟ ಅಧಿಕಾರಿಗಳು ಈ ಸಣ್ಣ ಉಳಿತಾಯ ಯೋಜನೆಯಲ್ಲಿ ಹಣ ತೊಡಗಿಸಿ ಸರ್ಟಿಫಿಕೇಟ್ ತೆಗೆದುಕೊಳ್ಳಬೇಕೆಂದು ಒತ್ತಾಯ ಮಾಡುತ್ತಿರುವುದು ತಮ್ಮ ಗಮನಕ್ಕೆ ಬಂದಿದೆಯೆ ?

† ಶ್ರೀ ಎಸ್. ಎಂ. ಯಾಹ್ಯಾ.—ಈ ಸಣ್ಣ ಉಳಿತಾಯ ಯೋಜನೆ ಬಹಳ ಉಪಯುಕ್ತವಾದ ಯೋಜನೆ. ಇದರಿಂದ ವ್ಯಕ್ತಿ ಹಾಗೂ ಸಮಾಜದ ಅಭಿವೃದ್ಧಿಯಾಗುವುದಕ್ಕೆ ಸಹಾಯವಾಗುತ್ತದೆ. ಇದನ್ನು ಜನಗಳೇ ಸ್ವಪ್ರೇರಣೆಯಿಂದ ಮುಂದೆ ಬಂದು ತೆಗೆದುಕೊಳ್ಳುತ್ತಾರೆ. ಇದಕ್ಕೆ ಯಾರ ಒತ್ತಾಯವೂ ಆಗತ್ಯವಿಲ್ಲ. ಈ ಉಳಿತಾಯ ಹಣಕ್ಕೆ ಬಡ್ಡಿಯನ್ನೂ ಕೂಡ ಬಹಳ ಆಕರ್ಷಣೀಯವಾಗಿ ಕೊಡುತ್ತಿದ್ದೇವೆ. ಈ ಯೋಜನೆಯಲ್ಲಿ ಹಣವನ್ನು ತೊಡಗಿಸುವಂತೆ ಬಲವಂತಪಡಿಸುವುದು ಸರ್ಕಾರದ ಇಚ್ಛೆಯಲ್ಲ. ನಾನು ಕಳೆದ ವರ್ಷ ಬಹಳಷ್ಟು ಹಳ್ಳಿಗಳಿಗೆ ಹೋಗಿ ಈ ಯೋಜನೆ ಬಗ್ಗೆ ಜನಗಳಿಗೆ ತಿಳುವಳಿಕೆ ಕೊಟ್ಟು ಬಂದಿದ್ದೇನೆ. ಅದಷ್ಟೇ ಸಾಲದು, ಪ್ರತಿಯೊಬ್ಬ ಸದಸ್ಯರೂ, ಪ್ರತಿಯೊಬ್ಬ ವ್ಯಕ್ತಿಯೂ ಸಣ್ಣ ಉಳಿತಾಯ ಯೋಜನೆ ಬಗ್ಗೆ ಜನಗಳಿಗೆ ತಿಳುವಳಿಕೆ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಬಿ. ಎಚ್. ಲಕ್ಷ್ಮಣಯ್ಯ.—ಸಣ್ಣ ಉಳಿತಾಯದ ಬಗ್ಗೆ ನಮ್ಮದೇನು ವಿರೋಧವಿಲ್ಲ. ತಾವು ಹೇಳಿದಹಾಗೆ ಜನರು ಸ್ವತಃ ಸಣ್ಣ ಉಳಿತಾಯದಲ್ಲಿ ತೊಡಗಿಸಿದರೆ ಅದಕ್ಕೆ ನಮ್ಮ ಅಭ್ಯಂತರವಿಲ್ಲ. ಈಗ ಬಡವರು, ಹರಿಜನಗಿರಿಜನರು, ಗ್ರಾಮಾಂತರ ಪ್ರದೇಶಗಳಲ್ಲಿರತಕ್ಕಂಥವರು ಸಿಮೆಂಟ್ ಮೂಟೆಗೆ ಬಂದಾಗ, ಸಣ್ಣ ಪುಟ್ಟ ಏಷಯಗಳಿಗೆ ಅಂದರೆ ಸರ್ಟಿಫಿಕೇಟನ್ನು ಕೇಳಿದಾಗ ನೀವು ನಿಗಧಿಮಾಡಿರುವಂತೆ ಜಿಲ್ಲಾಧಿಕಾರಿಗಳು ವಸೂಲು ಮಾಡುತ್ತಿದ್ದಾರೆ. ಜಿಲ್ಲಾಧಿಕಾರಿಗಳಿಗೆ ಇಂಥಿಂಥಾದ್ದಕ್ಕೆ ಇಷ್ಟಿಷ್ಟೇ ವಸೂಲು ಮಾಡಬೇಕೆಂದಿರುವುದರಿಂದ ಅವರು ರೈತರಿಂದ ವಸೂಲು ಮಾಡುತ್ತಿರುತ್ತಾರೆ. ನೀವು ಇರುವ ರೈತರಿಂದ ಸಣ್ಣ ಉಳಿತಾಯಕ್ಕೆ ವಸೂಲು ಮಾಡಿದರೆ ಅಭ್ಯಂತರವಿಲ್ಲ. ಬಡವರ ಮೇಲೆ ಏನು ಒತ್ತಾಯ ಮಾಡುತ್ತಿದ್ದಾರೆ ಅದನ್ನು ವಸೂಲು ಮಾಡದ ರೀತಿಯಲ್ಲಿ ಏರ್ಪಾಡು ಮಾಡಬೇಕೆಂದು ಹೇಳುತ್ತೇನೆ.

ಶ್ರೀ ಎಸ್. ಎಂ. ಯಾಹ್ಯಾ.—ನಿಮ್ಮ ಅಭಿಪ್ರಾಯವೇನು ಇರುತ್ತದೆ. ನಮ್ಮ ಅಭಿಪ್ರಾಯವು ಅದೇ ಆಗಿರುತ್ತದೆ. ಇದರಲ್ಲಿ ಯಾವ ವಿದವಾದ ವ್ಯತ್ಯಾಸವೂ ಇಲ್ಲ. ಒತ್ತಾಯ ಮಾಡಬೇಕೆಂಬ ಅಭಿಪ್ರಾಯವಿಲ್ಲ. ನಾವು ನೀವು ಎಲ್ಲ ಸೇರಿ ಈ ಯೋಜನೆಗೆ ಬಹಳಷ್ಟು ಶಕ್ತಿ ಕೊಡಬೇಕು. ಈಗ ಗ್ರಾಮಾಂತರ ಪ್ರದೇಶಗಳಲ್ಲಿ ಕೊಟ್ಯಾಂತರ ರೂಪಾಯಿಗಳ ಅಭಿವೃದ್ಧಿ ಕಾರ್ಯಗಳು ನಡೆಯುತ್ತಾ ಇದೆ. ಈ ಅಭಿವೃದ್ಧಿ ಕಾರ್ಯಗಳಲ್ಲಿ ಕೊಟ್ಯಾಂತರ ರೂಪಾಯಿಗಳನ್ನು ಖರ್ಚುಮಾಡುವಾಗ ಈ ಸಣ್ಣ ಉಳಿತಾಯ ಮಾಡುವಂಥ ಅಭ್ಯಾಸ ಮಾಡಿದರೆ ಅವರಿಗೂ ಒಳ್ಳೆಯದು. ಈರೀತಿ ಉಳಿತಾಯ ಮಾಡಿದಂಥ ಹಣದಿಂದ ಪಬ್ಲಿಸಿಟಿ ಮೆಟೀರಿಯಲ್ಸ್, ಡಿಸ್ಪ್ಲೇಬ್ಲಾಟ್ ಮಾಡುತ್ತೇವೆ. ಪಂಚಾಯತಿ ಮತ್ತು ಎಜ್ಯುಕೇಷನ್ ಸೊಸೈಟಿಗಳಿಗೆ ಅವಾರ್ಡ್ಸ್ ಕೊಡುತ್ತೇವೆ. ಮೂರು ಲಕ್ಷ ರೂಪಾಯಿಗಳನ್ನು ಕಲೆಕ್ಟ್ ಮಾಡಿಬಿಟ್ಟರೆ ನಾವು ಅವರಿಗೆ ೧೦ ಸಾವಿರ ರೂಪಾಯಿಗಳನ್ನು ಅವಾರ್ಡ್ ಕೊಡುತ್ತೇವೆ. ಐದೂವರೆ ಲಕ್ಷ ರೂಪಾಯಿ ಕಲೆಕ್ಟ್ ಮಾಡಿದರೆ ೫ ಸಾವಿರ ರೂಪಾಯಿ ಅವಾರ್ಡ್ ಕೊಡುತ್ತೇವೆ. ಇದು ಸರ್ಕಾರದಿಂದ ಬಾಗಲಿ ಆಫಿಸರ್ ಆಫೀಸರಿಂದ ಆಗಲಿ ಆಗತಕ್ಕಂಥ ಯೋಜನೆಯಾಗಬಾರದು. ಇದು ಸಾರ್ವಜನಿಕರಿಂದ ಆಗಬೇಕೆಂಬುದೇ ಸರ್ಕಾರದ ಉದ್ದೇಶವಾಗಿರುತ್ತದೆ. ಆದ್ದರಿಂದ ಇನ್‌ಸ್ಪಿಟ್ಯೂಷನ್‌ಗಳಿಗೆ ಚಿಕ್ಕ ಉಳಿತಾಯವಾಗಿ ಮಾತ್ರ ಸರ್ಕಾರವವರು ಪ್ರೋತ್ಸಾಹವನ್ನು ಕೊಡುತ್ತಿದ್ದೇವೆ.

ಶ್ರೀ ಜಿ. ಎಸ್. ಶಿವನಂಜಪ್ಪ.—ಸ್ವಾಮಿ ಮಾನ್ಯ ಮಂತ್ರಿಗಳು ಉತ್ತರ ಕೊಡುವುದನ್ನು ನೋಡಿದರೆ ಬಹಳ ಪಶ್ಚಾತ್ತಾಪವಾಗುತ್ತದೆ. ಪ್ರತಿಯೊಂದು ಸಂದರ್ಭದಲ್ಲಿಯೂ ಸಾಲಕ್ಕೆಂದು ಅರ್ಜಿಯನ್ನು ಹಾಕಿದರೆ ಸಣ್ಣ ಉಳಿತಾಯದಲ್ಲಿ ಹಣವನ್ನು ತೊಡಗಿಸಬೇಕೆಂದು ಹೇಳುತ್ತಾರೆ. ಎರಡೂವರೆ ಎಕರೆ ಯುಳ್ಳ ಮಾರ್ಜಿನಲ್ ಫಾರ್ಮರ್ಸ್ ಬಾವಿಯನ್ನು ತೊಡಲು ಜಮೀನು ಅಭಾದಿಗಾಗಿ ಸಾಲವನ್ನು ಕೇಳಿದರೆ ೧೦೦ ರೂಪಾಯಿಗೆ ೧೦ ರೂಪಾಯಿಗಳನ್ನು ಸಣ್ಣ ಉಳಿತಾಯದಲ್ಲಿ ತೊಡಗಿಸಬೇಕೆಂದು ಒತ್ತಾಯ ಮಾಡುತ್ತಿರುತ್ತಾರೆ. ಈ ವಿಷಯವನ್ನು ಪೇಪರ್‌ನಲ್ಲೂ ಕೂಡ ಕೊಟ್ಟಿದ್ದಾರೆ. ಅನೇಕಸಲ ಪತ್ರಿಕೆಗಳಲ್ಲಿ ಕಂಪ್ಲೈಂಟ್ ಕೂಡ ಬಂದಿರುತ್ತದೆ. ಆದ್ದರಿಂದ ಈ ರೀತಿಯಾಗಿ ವಸೂಲು ಮಾಡುತ್ತಿರುವುದನ್ನು ತಪ್ಪಿಸುವುದಕ್ಕೆ ಏನಾದರೂ ಕ್ರಮ ತೆಗೆದುಕೊಳ್ಳುತ್ತೀರಾ ಎಂದು ಕೇಳುತ್ತೇನೆ.

ಶ್ರೀ ಎಸ್. ಎಂ. ಯಾಹ್ಯಾ.—ಈ ರೀತಿಯಾಗಿ ಒತ್ತಾಯ ಮಾಡಕೂಡದು ಎಂದು ವಿಚಾರ ಇರುವಾಗ ಯಾರಾದರೂ ಒತ್ತಾಯ ಮಾಡಿದರೆ ಅದನ್ನು ಕಂಡಿತವಾಗಿಯೂ ತಡೆಗಟ್ಟುತ್ತೇನೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ಮಾನ್ಯ ಮಂತ್ರಿಗಳು ಹೇಳಿದ ರೀತಿಯಲ್ಲಿ ನೋಡಿದರೆ ಬಹಳ ಸಂತೋಷವಾಗುತ್ತದೆ. ಜನರು ಅವರೇ ಸಂತೋಷದಿಂದ, ಆನಂದದಿಂದ ಮುಂದೆ ಬಂದು ಹಣವನ್ನು ತೊಡಗಿಸಿದರೆ ಅದು ನಮಗೂ ಸಂತೋಷ. ತಾವು ಎಕ್ಸಾಮಿನ್ ಮಾಡಬೇಕು, ಎಲ್ಲೆಲ್ಲಿ ಸಾರ್ವಜನಿಕರು ಸರ್ಕಾರದಿಂದ ಸೌಕರ್ಯಗಳನ್ನು ಪಡೆಯತಕ್ಕಂಥ ಅವಕಾಶವಿರುತ್ತದೆ. ಅಲ್ಲೆಲ್ಲ ಕಂಪಲ್‌ಸರಿಯಾಗಿ ವಸೂಲು ಮಾಡುತ್ತಿರುತ್ತಾರೆ. ರೈತರು, ಹರಿಜನ ಗಿರಿಜನರು, ವ್ಯಾಪಾರಸ್ಥರು ಪರ್‌ಮಿಟ್ ತೆಗೆದು ಕೊಳ್ಳಬೇಕೆಂದಾಗ ಎಲ್ಲ ಕಡೆಯೂ ಇದು ಕಂಪಲ್‌ಸರಿ ಇರುತ್ತದೆ. ಡೆಪ್ಯುಟಿ ಕಮಿಷನರ್ ಆಫೀಸಿನಲ್ಲಿ, ತಹಸೀಲ್‌ದಾರ್‌ರವರ ಆಫೀಸಿನಲ್ಲಿ ಸಿಮೆಂಟ್, ಕಬ್ಬಿಣವನ್ನು ತೆಗೆದು ಕೊಳ್ಳಬೇಕಾದರೂ ಸಣ್ಣ ಉಳಿತಾಯದಲ್ಲಿ ತೊಡಗಿಸತಕ್ಕಂಥಾದ್ದು ಕಂಪಲ್‌ಸರಿ ಇರುತ್ತದೆ. ಆದ್ದರಿಂದ ಇದನ್ನು ತಪ್ಪಿಸಬೇಕು. ಶಿಕ್ಷಣಕ್ಕಾಗಿ ಕೊಡತಕ್ಕಂಥ ಒಳ್ಳೆಯ ಪ್ರಚಾರ ಏನು ಇರುತ್ತದೆ ಅದನ್ನು ಮಾಡಿ, ಬೇಡವೆಂದು ಹೇಳುವುದಿಲ್ಲ. ಈ ಕಂಪಲ್‌ಸರಿಯಾಗಿ ವಸೂಲು ಮಾಡತಕ್ಕಂಥ ಬಗ್ಗೆ ಕ್ರಮವನ್ನು ತೆಗೆದುಕೊಳ್ಳಬೇಕೆಂದು ಹೇಳುತ್ತೇನೆ.

ಶ್ರೀ ಎಸ್. ಎಂ. ಯಾಹ್ಯಾ.—ಈ ರೀತಿ ಒತ್ತಾಯ ಮಾಡುತ್ತಿದ್ದುದು ೨-೩-೪ ವರ್ಷದ ಹಿಂದೆ. ಈಗ ಬಹಳಷ್ಟು ಕಡಿಮೆಯಾಗಿರುತ್ತದೆ. ಈ ಒಂದು ಸ್ಕೀಮ್‌ನಿಂದ ಪ್ರತಿಯೊಬ್ಬ ಬಡಪರಿಗೂ ಅನುಕೂಲವಾಗುತ್ತಿದೆ. ಟಾರ್‌ಜೆಟ್ ಮುಟ್ಟಿದವರಿಗೆ ಕೊಡತಕ್ಕಂಥ ಬಡ್ಡಿ ನ್ಯಾಷನಲೈಸ್ಡ್ ಬ್ಯಾಂಕ್‌ಗಳು ಕೊಡತಕ್ಕಂಥ ಬಡ್ಡಿಗಿಂತಲೂ ಅಧಿಕವಾಗಿರುತ್ತದೆ. ಮೂರು ನಾಲ್ಕು ವರ್ಷದ ಹಿಂದೆ ಈರೀತಿ ದೂರುಗಳು ಬರುತ್ತಿತ್ತು. ಈ ಕಡೆ ವರ್ಷದಿಂದ ಬರುವುದು ಕಡಿಮೆಯಾಗಿರುತ್ತದೆ. ನಮ್ಮ ಪ್ರಚಾರದಲ್ಲಿಯೂ ಒತ್ತಾಯದ ರೀತಿಯಲ್ಲಿ ಇರಬಾರದೆಂದು ಆದರಿಂದ ಪ್ರಯೋಜನವಾಗುವುದಿಲ್ಲವೆಂದು ತಿಳಿದಿದ್ದೇವೆ. ಆದ್ದರಿಂದ ಯಾರಿಂದಲೂ ಕಂಪ್ಲೈಂಟ್ಸ್ ಬಾರದ ರೀತಿಯಲ್ಲಿ ಕಾರ್ಯವನ್ನು ಮಾಡಬೇಕೆಂದು ಎಲ್ಲ ಅಧಿಕಾರಿಗಳಿಗೂ ತಿಳಿಸುತ್ತೇನೆಂದು ನಾನು ತಿಳಿಸಲಿಕ್ಕೆ ಇಚ್ಛಿಸುತ್ತೇನೆ. ನಾನು ಏನು ಟಾರ್‌ಜೆಟ್

ಇಟ್ಟುಕೊಂಡಿದ್ದೆವು ಆದಕ್ಕಿಂತಲೂ ಹೆಚ್ಚಾಗಿಯೇ ಕಲೆಕ್ಟ್ ಮಾಡಿರುತ್ತೇವೆ. ಇದನ್ನು ಜನರು ಅಪ್ರಿಶಿಯೇಟ್ ಮಾಡಿರುತ್ತಾರೆ. ೧೯೭೮-೭೯ರಲ್ಲಿ ೫೦ ಕೋಟಿ ರೂಪಾಯಿಗಳು ಗ್ರಾಸ್ ಟಾರ್ಗೆಟ್ ಇದ್ದುದು ೭೧.೫೬ ಕೋಟಿ ರೂಪಾಯಿಗಳನ್ನು ಮುಟ್ಟಿರುತ್ತೇವೆ. ಅಂದರೆ ೪೩ ಪರ್ಸೆಂಟ್ ಹೆಚ್ಚಿಗೆಯಾಯಿತು. ಅನಂತರ ಟಾರ್ಗೆಟ್ ೨೦ ಕೋಟಿ ರೂಪಾಯಿ ಇಟ್ಟುಕೊಂಡಿದ್ದುದು ೨೬.೬೫ ಕೋಟಿ ರೂಪಾಯಿಗೆ ಬಂದಿತು. ಇದರಿಂದ ೪೮ ಪರ್ಸೆಂಟ್‌ನಷ್ಟು ಆಗಿರುತ್ತದೆ. ಆದ್ದರಿಂದ ಕಂಪಲ್‌ಸರಿ ಮಾಡತಕ್ಕಂಥ ಅಗತ್ಯವೇನು ಇಲ್ಲ. ಒತ್ತಾಯ ಮಾಡದ ರೀತಿಯಲ್ಲಿ ಯಾವರೀತಿ ಸಲಹೆಯನ್ನು ಕೊಡುತ್ತೀರಿ ಅದನ್ನು ಕಂಡಿತವಾಗಿಯೂ ಯೋಜನೆ ಮಾಡುತ್ತೇನೆ. ಸ್ಮಾಲ್ ಸೇವಿಂಗ್ಸ್‌ನ್ನು ನಾವು ಎಲ್ಲರೂ ಸಹಕರಿಸಬೇಕು. ಗ್ರಾಮಾಂತರ ಪ್ರದೇಶಗಳಲ್ಲಿ ಒಂದು ರೀತಿ ಹ್ಯಾಬಿಟ್ ಆಗಿ ಬರತಕ್ಕಂಥ ರೀತಿಯಲ್ಲಿ ಸಹಕರಿಸಬೇಕೆಂದು ಹೇಳುತ್ತೇನೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ಯಾರು ತುಂಬ ಅವಶ್ಯಕವಾಗಿ ಹಣ ಇಲ್ಲ, ಸಾಲಕ್ಕಾಗಿ ಹೊರೆ ಬಂದಿರುತ್ತಾರೆ ಅಂಥವರಿಗೆ ಒತ್ತಾಯ ಮಾಡುವುದು ಒಳ್ಳೆಯದಲ್ಲ. ಯಾರಿಗೆ ಸಾಮರ್ಥ್ಯವಿದೆ ಅವರು ಉಳಿತಾಯ ಮಾಡುವುದರಲ್ಲಿ ಹಣವನ್ನು ತೊಡಗಿಸಿದರೆ ತೊಂದರೆ ಏನು ಇಲ್ಲ. ಆದರೆ ಜಮೀನು ಅಭಿವೃದ್ಧಿಗಾಗಿ ಸಾಲವನ್ನು ಪಡೆಯಲು ಬಂದಂಥ ಬಡ ರೈತರಿಂದ ಈರೀತಿ ಒತ್ತಾಯದಿಂದ ೧೦ ಪರ್ಸೆಂಟ್ ೫ ಪರ್ಸೆಂಟ್ ಸಾಲವನ್ನು ಇನ್‌ವೆಸ್ಟ್ ಮಾಡಿ ಎಂದರೆ ಇದರಿಂದ ಬಹಳ ತೊಂದರೆಯಾಗುತ್ತದೆ. ಆದ್ದರಿಂದ ತೊಂದರೆಯಾಗದಂತೆ ನೋಡಿಕೊಳ್ಳಬೇಕೆಂದು ಹೇಳುತ್ತೇನೆ.

ಶ್ರೀ ಎಸ್. ಎಂ. ಯಾಹ್ಯಾ.—ಈಗ ಸದ್ಯಕ್ಕೆ ಆ ರೀತಿಯಾಗಿ ಹೆಚ್ಚು ಕಂಪ್ಲೈಂಟ್ಸ್ ಬರುತ್ತಾ ಇಲ್ಲ. ಬಡರೈತರಿಗೆ ಹೆಚ್ಚಿನ ತೊಂದರೆಯಾಗದ ರೀತಿಯಲ್ಲಿ ನೋಡಿಕೊಳ್ಳುತ್ತೇನೆ.

ಶ್ರೀ ಜಿ. ಬಿ. ಶಂಕರರಾವ್. ಸ್ಮಾಲ್ ಸೇವಿಂಗ್ಸ್‌ಗಾಗಿ ಸಹಕಾರಿ ಸಂಘಗಳು ರೈತರಿಂದ ವಸೂಲು ಮಾಡಿದ್ದನ್ನು ತಕ್ಷಣ ಅವರಿಗೆ ತಿಳಿಸಿ ಸರ್ಟಿಫಿಕೇಟ್ ಇಷ್ಯೂ ಮಾಡುವುದಿಲ್ಲ. ವರ್ಷಾನುಗಟ್ಟಲೆ ಯಾದರೂ ಅವರಲ್ಲೇ ಇಟ್ಟುಕೊಂಡಿರುತ್ತಾರೆ. ಇದರಿಂದ ರೈತರಿಗೆ ತೊಂದರೆಯಾಗುತ್ತದೆ. ಈರೀತಿ ಆಲಕ್ಷ್ಯ ಮಾಡಿ ವಸೂಲು ಮಾಡಿದ ತಕ್ಷಣ ಸ್ಮಾಲ್ ಸೇವಿಂಗ್ಸ್ ಸ್ಕೀಮ್‌ಗೆ ಜಮಾ ಮಾಡದೆ ಇರತಕ್ಕಂಥ ಅಧಿಕಾರಿಗಳ ಮೇಲೆ ಏನು ಕ್ರಮವನ್ನು ತೆಗೆದುಕೊಳ್ಳುತ್ತೀರಾ ?

ಶ್ರೀ ಎಸ್. ಎಂ. ಯಾಹ್ಯಾ.—ಆ ರೀತಿ ಯಾವುದಾದರೂ ಇದ್ದರೆ, ನಿರ್ದಿಷ್ಟವಾದ ನಿದರ್ಶನಗಳನ್ನು ಕೊಟ್ಟರೆ ಅವರ ಬಗ್ಗೆ ಕ್ರಮ ತೆಗೆದುಕೊಳ್ಳುತ್ತೇನೆ.

ಶ್ರೀ ಎಚ್. ಲಕ್ಷ್ಮಣಯ್ಯ.—ಸಣ್ಣ ಉಳಿತಾಯ ಮಾಡುತ್ತೇನೆಂದು ಹೇಳಿದಿರಿ. ಹೆಚ್ಚಿನ ರೀತಿಯಲ್ಲಿ ಪ್ರಚಾರ ಮಾಡಿ ಸಣ್ಣ ಉಳಿತಾಯದಲ್ಲಿ ಹೆಚ್ಚಿನ ಹಣವನ್ನು ಸಂಗ್ರಹಮಾಡಿದವರಿಗೆ ಏನಂ ಕ್ರಮ ಹಾಕಿಕೊಂಡಿರುತ್ತೀರಿ ?

ಶ್ರೀ ಎಸ್. ಎಂ. ಯಾಹ್ಯಾ.—ನಾವು ಮೊದಲನೆಯದಾಗಿ ಪಬ್ಲಿಸಿಟಿ ಕೊಡುತ್ತೇವೆ. ಎರಡನೆಯದಾಗಿ ಖಾಸಗಿ ಸಂಸ್ಥೆಯಾಗಿರಲಿ ಪಂಚಾಯತಿಗಳಾಗಿರಲಿ, ಎಜ್ಯುಕೇಶನ್ ಸೊಸೈಟಿಗಳಾಗಿರಲಿ, ಅವರಿಗೆ ಅವಾರ್ಡ್ಸ್‌ನ್ನು ಕೊಡುತ್ತೇವೆ. ಹೊಸ ಅವಾರ್ಡ್ಸ್ ಪಾಲಿಸಿಯನ್ನು ತಂದು ಅದರಲ್ಲಿ ಅವರು ಇನ್‌ವಾಲವ್ ಆಗುವಂಥ ಕಾರ್ಯವನ್ನು ಮಾಡುತ್ತಿದ್ದೇವೆ. ಮೂರನೇಯದಾಗಿ ನಾನು ಕೂಡ ಕೆಲವು ಕಡೆ ಹೋಗಿ ಸಾಮಾನ್ಯ ಜನರಿಗೂ ಇದು ತಿಳಿಯುವಂತೆ ಪ್ರಚಾರ ಮಾಡಿದ್ದೇನೆ. ಏತಕ್ಕೆಂದರೆ ಬಹಳ ಮುಖ್ಯವಾಗಿ ಈ ಸ್ಕೀಮ್‌ಗೆ ಕೇಂದ್ರ ಸರ್ಕಾರದವರು ಮೂರರಲ್ಲಿ ಎರಡು ಅಂಶದಷ್ಟು ಫೈನಾನಿಯಲ್ ಅಸಿಸ್ಟೆನ್ಸ್ ಕೊಡುತ್ತಾರೆ. ಎಷ್ಟರಮಟ್ಟಿಗೆ ನಾವು ಸಂಗ್ರಹಣೆ ಮಾಡುತ್ತೇವೆಯೋ ಅದರಲ್ಲಿ ಶೇಕಡ ೭೦ ರಷ್ಟು ಅಭಿವೃದ್ಧಿಕಾರ್ಯಗಳಿಗೆ ಕೊಡುತ್ತಾರೆ. ಆದ್ದರಿಂದ ನಾವು ಹೆಚ್ಚು ಹೆಚ್ಚು ಕಲೆಕ್ಟ್ ಮಾಡುವುದಕ್ಕೆ ಪ್ರಯತ್ನ ಮಾಡಬೇಕೆಂದು ಹೇಳುತ್ತೇನೆ. ಕಲೆಕ್ಟ್ ಮಾಡಿದಹಾಗೆ ಬಹಳ ಮಟ್ಟಿಗೆ ಒಳ್ಳೆಯ ಕಾರ್ಯಗಳಿಗೆ ಹೆಚ್ಚು ಹೆಚ್ಚು ಹಣ ಬರುತ್ತದೆಂದು ಹೇಳುತ್ತೇನೆ. ನಾವು ಹೆಚ್ಚು ಹೆಚ್ಚು ಹಣ ಕಲೆಕ್ಟ್ ಮಾಡಿದಹಾಗೆ ನಮಗೆ ಅಭಿವೃದ್ಧಿಕಾರ್ಯಕ್ಕೆ ಹೆಚ್ಚು ಹೆಚ್ಚು ಹಣ ಬರುತ್ತದೆ. ಆ ದೃಷ್ಟಿಯಿಂದ ನಮ್ಮ ಸರ್ಕಾರ ಈ ಯೋಜನೆಯನ್ನು ಹೆಚ್ಚು ಜನಪ್ರಿಯಗೊಳಿಸುವುದಕ್ಕೆ ಕ್ರಮ ತೆಗೆದು ಕೊಂಡಿದೆ. ಮುಂದೆ ಇನ್ನೂ ಹೆಚ್ಚು ಜನಪ್ರಿಯಗೊಳಿಸುವುದಕ್ಕೆ ಸಾಧ್ಯವೇ ಎಂಬುದನ್ನು ನೋಡಿ ಆ ರೀತಿ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇನೆ.

ಅಧ್ಯಕ್ಷರು.—ಇಲ್ಲಿಗೆ ಪ್ರಶ್ನೆಗಳು ಮುಗಿದವು.